# ಹೀಗೊಂದು ಪುಸ್ತಕ

**ಕುಂದಾಪುರ ತಾಲ್ಲೂಕಿನ ತಲ್ಲೂರು ಗ್ರಾಮದ ಎಲ್.ಎನ್. ತಲ್ಲೂರು ಅವರ ಕಲಿಕೆಯ ದಾರಿಯಲ್ಲಿ ಬೆಂಗಳೂರು, ಮೈಸೂರು, ಬರೋಡಾ, ಲೀಡ್ಸ್ ಗಳು ಕಾಣಿಸುತ್ತವೆ. ಪ್ರಸ್ತುತ, ತಲ್ಲೂರರ ಒಂದು ಕಾಲು ಕರ್ನಾಟಕದ ಕೋಟೇಶ್ವರದಲ್ಲೂ ಇನ್ನೊಂದು ಕಾಲು ದಕ್ಷಿಣ ಕೊರಿಯಾದ ದೆಗು ನಗರದಲ್ಲೂ ಇದೆ.**

★ **ಮಹತಿ**



ಔರೋಫೋಬಿಯಾ... ಕೈಗಾರಿಕಾ ಪೇಂಟ್ ಹಚ್ಚಿದ ಸುಟ್ಟ ಮರ ಹಾಗೂ ಕಬ್ಬಿಣ ಬಳಸಿ ಮಾಡಿದ ರಥ. ಇದು ಆಸ್ಟ್ರೇಲಿಯಾದ ಕೆನ್‌ಬೆರ್ರಾದಲ್ಲಿ ಏಳನೇ ಏಷ್ಯಾ ಪೆಸಿಫಿಕ್ ಟ್ರಯನಾಲ್ ಪ್ರದರ್ಶನದ ಚಿತ್ರ.

ನಗುವ ಬುದ್ಧನನ್ನು ಹೋಲುವ ಬೃಹತ್ ಗ್ರಾನೈಟ್ ಶಿಲ್ಪ. ಅದರ ಮಡಿಲಿನಿಂದ ತಲೆಯವರೆಗೆ ಒರಗಿಕೊಂಡಿರುವ ಮರದ ಕೊರಡು. ಮೈತುಂಬಾ ಸುತ್ತಿಗೆಯಿಂದ ಹೊಡೆಸಿಕೊಂಡ ನಾಣ್ಯಗಳು! 'ಕ್ರೊಮಾಟೊ ಫೋಬಿಯಾ' ಹೆಸರಿನಿಂದ ಕರೆಸಿಕೊಳ್ಳುವ ಎಲ್.ಎನ್. ತಲ್ಲೂರು ಅವರ ಕಲಾಕೃತಿಯಿದು. ಆಧುನಿಕ ಜಗತ್ತಿನ ಪ್ರಭಾವಳಿ ಹಾಗೂ ಅದರ ಕ್ಷಣಿಕತೆ – ಎರಡನ್ನೂ ಒಟ್ಟಿಗೆ ಹಿಡಿಯುವಂತಿರುವ ಈ ಇನ್ಸ್ಟಾಲೇಶನ್ ಕಲಾವಿದನ ಪ್ರತಿಭಾವಿಲಾಸದ ಉದಾಹರಣೆಯೂ ಹೌದು.

ಈ ಕಲಾಕೃತಿಯ ಬಗ್ಗೆ ತಲ್ಲೂರರು ನೀಡುವ ಟಿಪ್ಪಣಿಯನ್ನು ಗಮನಿಸಿ: ಜೇಬಿನಿಂದ ಒಂದು ನಾಣ್ಯ ತೆಗೆದುಕೊಳ್ಳಿ. ಸುತ್ತಿಗೆಯನ್ನೂ ಕೈಗೆತ್ತಿಕೊಳ್ಳಿ. ದೀರ್ಘವಾಗಿ ಉಸಿರೆಳೆದುಕೊಳ್ಳಿ. ನಿಮ್ಮೆಲ್ಲ ತಲ್ಲಣಗಳನ್ನೂ ಋಣಾತ್ಮಕ ಯೋಚನೆಗಳನ್ನೂ ಪಕ್ಕಕ್ಕಿಟ್ಟು, ಸುತ್ತಿಯಿಂದ ನಾಣ್ಯವನ್ನು ಕೊರಡಿಗೆ ಹೊಡೆಯಿರಿ. ಈ ಮೂಲಕ ಮುಂದಿನ ದಿನಗಳಲ್ಲಿ ನಿಮ್ಮ ಬಯಕೆ ಈಡೇರುತ್ತದೆ.

ಈ ಟಿಪ್ಪಣಿ, ಆಧುನಿಕ ಮನುಷ್ಯನ ಬದುಕಿನ ಸಂಕೀರ್ಣತೆಯನ್ನು ಹಿಡಿದಿಡುವ ತಲ್ಲೂರರ ಮನದ ಮಾತಿನಂತಿದೆ. ಈ ಕಲಾಕೃತಿಯಷ್ಟೇ ಅಲ್ಲ – ತಲ್ಲೂರರ ಬಹುತೇಕ ಇನ್‌ಸ್ಟಾಲೇಷನ್‌ಗಳು, 'ಸಂಪಾದಿಸುವ ಮತ್ತು ಕಳಚಿಕೊಳ್ಳುವ' ಬದುಕಿನ ಅನಿವಾರ್ಯತೆಯನ್ನು ಸೂಚಿಸುವಂತಿವೆ. 'ತಲ್ಲೂರು ಎಲ್.ಎನ್.' ಕೃತಿಯಲ್ಲಿರುವ 'ಅಪೊಕಾಲಿಪ್ಸ್', 'ವಿಕ್ಟರಿ ಪಿಲ್ಲರ್', 'ಲೈವ್ ಸ್ಟಾಕ್', 'ಪಾಸ್ವರ್ಡ್', 'ಎಟಿಎಂ' – ಇವೆಲ್ಲ ಕಲಾಕೃತಿಗಳ ಹಿನ್ನೆಲೆಯಲ್ಲಿರುವುದು ಮನುಷ್ಯನ ಅನುಗಾಲದ ತವಕ ತಲ್ಲಣಗಳೇ.

ಕನ್ನಡಿಗರ ಪಾಲಿಗೆ ತಲ್ಲೂರರದು ಚಿರಪರಿಚಿತ ಹೆಸರೇನಲ್ಲ. ಆದರೆ, ಅಂತರರಾಷ್ಟ್ರೀಯ ಕಲಾನಕಾಶೆಯಲ್ಲಿ ಅವರದು ಪ್ರಸಿದ್ಧ ಹೆಸರು. ಸಮಕಾಲೀನ ಭಾರತೀಯ ಕಲೆಯ ಪ್ರಾತಿನಿಧಿಕ ಹೆಸರುಗಳಲ್ಲಿ ಅವರದೂ ಒಂದು.

ಕುಂದಾಪುರ ತಾಲ್ಲೂಕಿನ ತಲ್ಲೂರು ಗ್ರಾಮದ ಅವರ ಕಲಿಕೆಯ ದಾರಿಯಲ್ಲಿ ಬೆಂಗಳೂರು, ಮೈಸೂರು, ಬರೋಡಾ, ಲೀಡ್ಸ್ ಗಳು ಕಾಣಿಸುತ್ತವೆ. ಪ್ರಸ್ತುತ, ತಲ್ಲೂರರ ಒಂದು ಕಾಲು ಕರ್ನಾಟಕದ ಕೋಟೇಶ್ವರದಲ್ಲೂ ಇನ್ನೊಂದು ಕಾಲು ದಕ್ಷಿಣ ಕೊರಿಯಾದ ದೆಗು ನಗರದಲ್ಲೂ ಇದೆ.

ತಲ್ಲೂರರ ಕೃತಿಗಳಲ್ಲಿ ಅಪ್ಪಟ ಆಧುನಿಕ ಪ್ರಜ್ಞೆ ಎದ್ದುಕಾಣುತ್ತದಾದರೂ, ಪರಂಪರೆಯ ಜೀವದ್ರವ್ಯ ಕೂಡ ಅವರ ಕಲಾಕೃತಿಗಳ ಆಳದಲ್ಲಿ ಇರುವುದನ್ನು ನೋಡಬಹುದು. ಬುದ್ಧ, ಗಾಂಧಿ ಅವರ ಸೃಜನಶೀಲತೆಯ ಸ್ಫೂರ್ತಿಕೇಂದ್ರಗಳೇ ಆಗಿದ್ದಾರೆ. ಮಂಗಳೂರು ಹಂಚುಗಳು ರೂಪಕಗಳಾಗಿ ಒದಗಿಬರುತ್ತವೆ. ಶಾಲಾದಿನಗಳಲ್ಲಿ ಅವರು ಕೊಡೆಯನ್ನು ಗಾಳಿಯಲ್ಲಿ ಹಾರಿಬಿಟ್ಟು, ಅದು ಹಾರಿಹೋಗುವ ದಿಕ್ಕನ್ನೇ ನೋಡುತ್ತಾ ನಿಲ್ಲುತ್ತಿದ್ದರಂತೆ. ಕಲಾವಿದರಾಗಿ ಬೆಳೆದ ನಂತರವೂ ಈ ಕುತೂಹಲವನ್ನು ಉಳಿಸಿಕೊಂಡಿದ್ದಾರೆ. ಲೋಹ, ಮರ, ಯಂತ್ರ, ನಾಣ್ಯ – ಎಲ್ಲ ವಸ್ತುಗಳಿಂದಲೂ ಅರ್ಥಗಳನ್ನು ಮಿಡಿಸುವ ಪ್ರಯತ್ನ ಅವರದು.

'ತಲ್ಲೂರು ಎಲ್.ಎನ್.' ಕೃತಿಯನ್ನು ಮೂರು ಕಾರಣಗಳಿಂದಾಗಿ ಗಮನಿಸಬೇಕು. ಅಸಾಧಾರಣ ಕಲೆಗಾರನೊಬ್ಬನ ಬದುಕು ಸಾಧನೆಯ ಬಿಂಬಗಳ ದಾಖಲೆಯಾಗಿ ಈ ಕೃತಿಗೆ ಮಹತ್ವವಿದೆ. ಎರಡನೆಯ ಕಾರಣ, ತಲ್ಲೂರರನ್ನು ಕನ್ನಡದ ಜನತೆಗೆ ಪರಿಚಯಿಸಬೇಕೆನ್ನುವ ಸಂಪಾದಕರಾದ ರಾಜಾರಾಂ ತಲ್ಲೂರರ ಪ್ರಾಮಾಣಿಕ ಪ್ರಯತ್ನ. ಕಲಾಕೃತಿಗಳ ಮೂಲಕವೇ ಕಲಾಕಾರನನ್ನು ಪರಿಚಯಿಸುವ ಪ್ರಯತ್ನ ಗಮನ ಸೆಳೆಯುವಂತಿದೆ. ಮೂವರು ವಿದೇಶಿ ಕಲಾತಜ್ಞರ ಬರಹಗಳು ಪುಸ್ತಕದ ಮೌಲ್ಯವನ್ನು ಹೆಚ್ಚಿಸಿವೆ. ಸ್ವತಃ ರಾಜಾರಾಂ ಅವರು ತಮ್ಮ ಕಿರಿಯ ಸೋದರನ ಯಶೋಗಾಥೆಯ ಕುರಿತು ಆಪ್ತ ಲೇಖನವೊಂದನ್ನು ರೂಪಿಸಿದ್ದಾರೆ. ಪುಸ್ತಕದ ಮತ್ತೊಂದು ಅಗ್ಗಳಿಕೆ ಅದರ ಸೌಂದರ್ಯದಲ್ಲಿದೆ. ನುಣುಪು ಕಾಗದದಲ್ಲಿ ಮುದ್ರಣಗೊಂಡಿರುವ ಕೃತಿ, ವಿನ್ಯಾಸ ಮತ್ತು ಗುಣಮಟ್ಟದಲ್ಲಿನ ಉತ್ಕೃಷ್ಟತೆಯಿಂದಾಗಿ ಕನ್ನಡ ಪುಸ್ತಕೋದ್ಯಮ ತಲುಪಿರುವ ಹೊಸ ಮಜಲನ್ನು ಸೂಚಿಸುವಂತಿದೆ.

ಸಂ: ರಾಜಾರಾಂ ತಲ್ಲೂರು; ಪು: 132; ಬೆ: ರೂ. 500; ಪ್ರ: ಪ್ರೊಡಿಜಿ ಮುದ್ರಣ, ನಂ. 6227, ತಳ ಅಂತಸ್ತು, ಕೆನರಾ ಟವರ್, ಮಿಷನ್ ಆಸ್ಪತ್ರೆ ರಸ್ತೆ, ಉಡುಪಿ 576101.